ದಿನಾಂಕ: 07.12.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಟಿ ಎಸ್ ವಕೀಲರಿಂದಃ**

ನಾನು ದಯಾನಂದರವರನ್ನು 1995 ರಲ್ಲಿ ಮದುವೆಯಾಗಿರುತ್ತೇನೆ. ಈ ಬಗ್ಗೆ ನಾನು ದಾಖಲೆಯನ್ನು ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರೆದು ಮದುವೆ ಆಮಂತ್ರಣ ಪತ್ರ ಮಾಡಿಸಿರಲಿಲ್ಲ ಎಂದು ನುಡಿಯುತ್ತಾರೆ. ಬಳ್ಳಾರಿ ಜಿಲ್ಲೆಯ ಗುಳ್ಯಂ ಗ್ರಾಮದ ಗಾರಲಿಂಗಪ್ಪ ದೇವಸ್ಥಾನದಲ್ಲಿ ಮದುವೆಯಾಗಿರುತ್ತದೆ. ಯಾವುದೇ ಒಂದು ದೇವಸ್ಥಾನದಲ್ಲಿ ಮದುವೆಯಾದಲ್ಲಿ ಮದುವೆಯಾದ ಕುರಿತು ಸ್ವೀಕೃತಿ ಕೊಡುತ್ತಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು 1995 ರಲ್ಲಿ ದಯಾನಂದ್ ಮತ್ತು ನನ್ನ ಮದುವೆ ನಡೆದಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ದಿನಾಂಕ ನನಗೆ ನೆನಪಿಲ್ಲ. ನಾನು ದಯಾನಂದ್ ರವರ ಮನೆಯಲ್ಲಿ ಮನೆಕೆಲಸ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ದಯಾನಂದರ್ ರವರು ಅಮೃತವೇಣಿಯನ್ನು ಮದುವೆಯಾದ ವಿಚಾರ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಮಕ್ಕಳಾದ ನಂತರ ಅಮೃತವೇಣಿಯವರನ್ನು ಮದುವೆಯಾದ ವಿಚಾರ ನನಗೆ ಗೊತ್ತಾಗಿರುತ್ತದೆ. ದಯಾನಂದ್ ರವರು ಅಮೃತವೇಣಿಯನ್ನು ಮದುವೆಯಾಗಿ ಅವರಿಗೆ ಮೂರು ಜನ ಮಕ್ಕಳು ಇದ್ದರು ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ಯಾವ ಯಾವ ಆಸ್ತಿಗಳ ಮೇಲೆ ದಾವೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತು. ನನಗೆ ನೋಟೀಸ್ ಬಂದಾಗ ನ್ಯಾಯಾಲಯದಲ್ಲಿ ಯಾವ ಯಾವ ಆಸ್ತಿಗಳ ಮೇಲೆ ದಾವೆ ಸಲ್ಲಿಸಿದ್ದಾರೆ ಎಂಬ ವಿಚಾರ ಗೊತ್ತಿತ್ತು ಎಂದರೆ ಸರಿ. ದಯಾನಂದ್ ರವರ ಜೀವಿತ ಕಾಲದ ಕೊನೆಯಲ್ಲಿ ಬಳ್ಳಾರಿಯ ದೇವಿನಗರದ ಮೊದಲನೇ ಕ್ರಾಸ್ ನಲ್ಲಿ ವಾಸವಾಗಿದ್ದರು. ದಯಾನಂದ್ ರವರು ಅವರ ಜೀವಿತ ಕಾಲದ ಕೊನೆಯ ಸುಮಾರು 20 ವರ್ಷಗಳ ಮುಂಚೆ ಹರ್ತಿಕೋಟೆ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ನಿಜ. ನಾನು ಹರ್ತಿಕೋಟೆ ಗ್ರಾಮದಲ್ಲಿ ವಾಸವಾಗಿರಲಿಲ್ಲ ಎದಂರೆ ನಿಜ.

ಸಾಕ್ಷಿ ಮುಂದುವರೆದು ನಾವೆಲ್ಲರೂ ಬಂದು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. 20.11.2009 ರಂದು ಆದ ಪಾಲುವಿಭಾಗದ ಮಾತುಕತೆ ಯಾರೊಂದಿಗೆ ನಡೆದಿಲ್ಲ. ಸಾಕ್ಷಿ ಮುಂದುವರೆದು ದಯಾನಂದ್ ರವರೇ ಸ್ವಂತ ನಿರ್ಧಾರ ತೆಗೆದುಕೊಂಡಿರುತ್ತಾರೆ. 20.11.2009 ರಲ್ಲಿ ದಾಖಲೆ ಆಗುವಾಗ ನಾನು ಇದ್ದೆ. ಆ ಸಮಯಲ್ಲಿ ವಕೀಲರಾದ ಬೀನರಾಣಿಯವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಗುರುಮೂರ್ತಿಯವರು ಇದ್ದರು. ಗುರುಮೂರ್ತಿಯವರು ಈಗ ಮೃತ ಪಟ್ಟಿರುತ್ತಾರೆ. ಗುರುಮೂರ್ತಿಯವರು ಹೊವಿನಹೊಳೆ ಗ್ರಾಮದವರು. ಸದರಿ ಗುರುಮೂರ್ತಿಯವರು ದಯಾನಂದ್ ರವರ ಸಂಬಂಧಿಕರು ಎಂದು ಹೇಳುತ್ತಾರೆ. ಆದರೆ ನನಗೆ ಖುದ್ದಾಗಿ ಗೊತ್ತಿಲ್ಲ. ಆ ದಾಖಲೆಯನ್ನು ಹಿರಿಯೂರು ನೊಂದಣಿ ಕಛೇರಿಯಲ್ಲಿ ನೊಂದಣಿಯಾಗಿರುತ್ತದೆ. ಅದರ ತಯಾರಿ ಸಹ ಅಲ್ಲಿಯೇ ಆಗಿರುತ್ತದೆ. ಯಾರ ಹತ್ತಿರ ಮಾಡಿಸಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ದಾಖಲೆಯಲ್ಲಿ ಬರೆದ ವಿಚಾರವನ್ನು ಓದಿ ತಿಳಿದುಕೊಂಡಿರುತ್ತಾರೆ. ಸರ್ವೆ ನಂ.109/25 ರ 3 ಎಕರೆ 22 ಗುಂಟೆ ಭರತ್ ಪಟೇಲ್ ರವರಿಗೆ ಸರ್ವೆ ನಂ 109/26 ರಲ್ಲಿ3 ಎಕರೆ 22 ಗುಂಟೆಯನ್ನು ಶರತ್ ಪಟೇಲ್ ಗೆ ನೀಡಿರುತ್ತಾರೆ. ದಾವೆಸಲ್ಲಿಸಿದ ವಿಚಾರ ನನಗೆ ಗೊತ್ತಿದ್ದರೂ ಸಹ 5 ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ ಕ್ರಯ ಪತ್ರ ಸೃಷ್ಟಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ ಹೆಸರಿಗೆ ಇದ್ದುದ್ದರಿಂದ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಶರತ್ ಮತ್ತು ಭರತ್ ರವರಿಗೆ ಈ ದಾವೆ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಇವತ್ತು ನಾನು ನ್ಯಾಯಾಲಯಕ್ಕೆ ಬಂದ ವಿಚಾರ ನನ್ನ ಮಕ್ಕಳಿಗೆ ಗೊತ್ತಿರುತ್ತದೆ.

ಪಾಲು ವಿಭಾಗ ಪತ್ರ ಮಾಡಿಕೊಳ್ಳುವಾಗ ದಯಾನಂದ್ ರವರಿಗೆ 4 ನೇ ವಾದಿ ಅಮೃತವೇಣಿ ಮತ್ತು ಅವರಿಗೆ ಮಕ್ಕಳಿದ್ದ ವಿಚಾರ ಗೊತ್ತಿರುತ್ತದೆ. ನಿಡಿ-1 ರಲ್ಲಿ ದಯಾನಂದ್ ರವರು ಹರ್ತಿಕೋಟೆ ಗ್ರಾಮದಲ್ಲಿ ವಾಸವಾಗಿದ್ದರು ಎಂದು ನಮೂದು ಮಾಡಿದ್ದು ಸುಳ್ಳು ಎಂದರೆ

ಸಾಕ್ಷಿ ಅವರು ಹರ್ತಿಕೋಟೆ ಗ್ರಾಮಕ್ಕೆ ಹೋಗಿ ಬರುತ್ತಿದ್ದರಿಂದ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಭರತ್ ಗೌಡ ಮತ್ತು ಶರತ್ ಗೌಡ ಹರ್ತಿಕೋಟೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ಬರೆಸಿದ್ದೇವೆ ಎಂದರೆ ಸರಿಯಲ್ಲ. ನಾವು ಅಲ್ಲಿಗೆ ಹೋಗಿ ಬರುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಮಕ್ಕಳು ಮತ್ತು ದಯಾನಂದ್ ರವರ ವಿಳಾಸ ಗುರುತಿನ ಬಗ್ಗೆ ನೀಡಿದ ದಾಖಲೆಗಳಲ್ಲಿ ಬಳ್ಳಾರಿ ಎಂದು ನಮೂದಾಗಿದೆ ಎಂದರೆ ನಿಜ. ಯಾವುದೇ ಒಂದು ದಾಖಲೆ ನೊಂದಣಿ ಮಾಡಿಕೊಳ್ಳುವಾಗ ವಾಸವಿದ್ದವಿಳಾಸವನ್ನೇ ನೀಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ಬಳ್ಳಾರಿಯಲ್ಲಿ ವಾಸವಿದ್ದ ವಿಳಾಸವನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಾವು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. 2009 ರಲ್ಲಿ ನವಂಬರ್- ಡಿಸೆಂಬರ್ ಮಾಹೆಯಲ್ಲಿ ದಯಾನಂದ್ ರವರ ಮಾನಸಿಕ ಮತ್ತು ದೈಹಿಕ ಸ್ಥಿತಿ ಸ್ಥಿಮಿತದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಯಾನಂದ್ ರವರಿಗೆ ಸಕ್ಕರೆ ಖಾಯಿಲೆ ಮತ್ತು ಬಿ ಪಿ ಇತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ಆದರೂ ಅವರು ಚನ್ನಾಗಿ ಇದ್ದರು ಎಂದು ನುಡಿಯುತ್ತಾರೆ. ಅವರಿಗೆ ಸಕ್ಕರೆ ಖಾಯಿಲೆ ಮತ್ತು ಬಿ ಪಿ ಒಮ್ಮೆಲೆ ಹೆಚ್ಚಾಗಿ ಕಮ್ಮಿಯಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವಲ್ಪ ಮಟ್ಟಿಗೆ ಬದಲಾವಣೆಯಾಗುತ್ತಿತ್ತು ಎಂದು ನುಡಿಯುತ್ತಾರ. ನಿಡಿ-1 ನ್ನು ಮತ್ತು ಸಾಕ್ಷಿದಾರರನ್ನು ಸೃಷ್ಟಿಸಿ ಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ದಯಾನಂದ್ ರವರ ಆರೋಗ್ಯ ಸರಿಇಲ್ಲದ್ದನ್ನು ದುರುಪಯೋಗ ಪಡಿಸಿಕೊಂಡು ನಿಡಿ-1 ನ್ನು ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ-1 ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಾಲು ವಿಭಾಗ ಮಾಡಿಕೊಳ್ಳಲು ದಯಾನಂದ್ ರವರಿಗೆ ಮತ್ತು ನಮಗೂ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ದಯಾನಂದ್ ರವರ ಸ್ವಯಾರ್ಜಿ ಸ್ವತ್ತು ಎಂದು ನುಡಿಯುತ್ತಾರೆ. ನಾನು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ವಾದಿಗಳು ದಾವಾಸ್ವತ್ತುಗಳನ್ನು ಪಾಲುವಿವಿಭಾಗ ಮಾಡಿಕೊಳ್ಳಲು 2016 ರಲ್ಲಿ ನನನ್ನು ಕರೆದಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು